
# ಬನ್ನಿ, ಬೇಲೂರು ಮಠಕ್ಕೆ

ಸ್ವಾಮಿ ಆಶುತೋಷಾನಂದ



**ರಾಮಕೃಷ್ಣ ಮಹಾಸಂಘದ ಕೇಂದ್ರಸ್ಥಳವಾದ ಪವಿತ್ರ ಬೇಲೂರು ಮಠ ಮತ್ತು ದಿವ್ಯತ್ರಯರ ಜೀವನ ಹಾಗೂ ರಾಮಕೃಷ್ಣ ಮಹಾಸಂಘದ ಇತಿಹಾಸಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಇತರ ಪುಣ್ಯಕ್ಷೇತ್ರಗಳ ಪಾವನಗಾಥೆಯನ್ನು, ಅವುಗಳಿಗೆ ಸಂಬಂಧಪಟ್ಟ ಮಧುರ ಸ್ಮೃತಿಗಳೊಡನೆ ಆಪ್ಯಾಯಮಾನವಾಗಿ ವಿವರಿಸಿರುವ ಸ್ವಾಮೀಜಿಯವರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯ ರಾಗಿದ್ದಾರೆ. ಭಾವಾನುವಾದ: ಸಂ.**

**" ನೀವು ಆಧ್ಯಾತ್ಮಿಕ ಜೀವನದಲ್ಲಿ ಏನನ್ನಾದರೂ ಸಾಧಿಸ ಬೇಕೆಂದಿದ್ದರೆ, ಬೇಲೂರು ಮಠಕ್ಕೆ ಭೇಟಿಕೊಡಿ. ಇಲ್ಲಿ ತಂಗಿದ್ದು ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿ. ಇದಕ್ಕೆಂದೇ ಸ್ವಾಮಿ ವಿವೇಕಾನಂದರು ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಈ ಮಠವನ್ನು ಸ್ಥಾಪಿಸಿದರು"** – ಈ ಮಾತುಗಳನ್ನು ಹೇಳಿ ದವರು, ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾಗಿದ್ದ ಸ್ವಾಮಿ ಶಿವಾನಂದರು.

ರಾಮಕೃಷ್ಣ ಮಹಾಸಂಘದ ಮುಖ್ಯ ಕೇಂದ್ರವಾದ ಬೇಲೂರು ಮಠದಲ್ಲಿ ಆಧ್ಯಾತ್ಮಿಕ ಪ್ರವಾಹವೊಂದು ಹರಿಯುತ್ತಿದೆ. ಅದನ್ನು ಪರಿಭಾವಿಸಬೇಕಾದರೆ, ಅಲ್ಲಿಗೆ ನಾವು ಹೋಗಬೇಕು. ಹಾಗೆಯೇ, ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರು ಮತ್ತು ರಾಮಕೃಷ್ಣರ ಇತರ ಶಿಷ್ಯರಿಗೆ ಸಂಬಂಧಪಟ್ಟ ಸ್ಥಳಗಳಿಗೂ ಭೇಟಿಕೊಡಬೇಕು. ಇದೇ ನಮ್ಮ ತೀರ್ಥಯಾತ್ರೆಯ ಉದ್ದೇಶ. ಇನ್ನು ಹೊರಡೋಣವೇ?

## ಬೇಲೂರು ಮಠ

ಕೊಲ್ಕತಾದ ಹೌರಾ ರೈಲ್ವೇ ನಿಲ್ದಾಣದಲ್ಲಿ ರೈಲಿನಿಂದ ಇಳಿದಿದ್ದೇವೆ. ಒಂದು ಟ್ಯಾಕ್ಸಿಯನ್ನು ಮಾಡಿಕೊಂಡು, ಬೇಲೂರು ಮಠವನ್ನೂ ತಲುಪಿದ್ದೇವೆ. ಅಲ್ಲಿನ ಸಾಧುಗಳು ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿ, ಭೋಜನ ಪ್ರಸಾದವನ್ನು ನೀಡಿದರು; ವಸತಿಯ ವ್ಯವಸ್ಥೆಯನ್ನೂ ಮಾಡಿದರು.

ಬೇಲೂರು ಮಠ ಇರುವುದು ಗಂಗೆಯ ಪಶ್ಚಿಮ ತಟದಲ್ಲಿ. ಗಂಗೆಯ ಪಶ್ಚಿಮ ತಟ ಕಾಶಿ ಕ್ಷೇತ್ರದಷ್ಟೇ ಪವಿತ್ರ ಎಂದು ನಂಬಿಕೆ. ಅದಲ್ಲದೆ, ಬೇಲೂರು ಮಠಕ್ಕೆ ಶ್ರೀಮಾತೆ ಶಾರದಾದೇವಿಯವರು ಭೇಟಿ ಕೊಟ್ಟಿದ್ದಾರೆ; ಸ್ವಾಮಿ ವಿವೇಕಾನಂದರು ಇಲ್ಲಿಯೇ ತಂಗಿ ದ್ದಾರೆ; ಶ್ರೀರಾಮಕೃಷ್ಣರ ಹಲವಾರು ಪ್ರತ್ಯಕ್ಷ ಶಿಷ್ಯರು ಇಲ್ಲಿ ವಾಸ ಮಾಡಿದ್ದಾರೆ; ನೂರಾಹತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ, ರಾಮಕೃಷ್ಣ ಮಹಾಸಂಘಕ್ಕೆ ಸೇರಿದ ಸಾವಿರಾರು ಸಾಧುಸಂತರು ಇಲ್ಲಿ ಪವಿತ್ರಜೀವನವನ್ನು ನಡೆಸಿದ್ದಾರೆ. ಇವೆಲ್ಲದಕ್ಕೂ ಕಿರೀಟಪ್ರಾಯ

ವಾಗಿ, ಸ್ವಾಮಿ ವಿವೇಕಾನಂದರೇ ಶ್ರೀರಾಮಕೃಷ್ಣರ ಅಸ್ಥಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ. ಆ ಮೂಲಕ ಬೇಲೂರು ಮಠವನ್ನು ಅತ್ಯಂತ ವಿಶಿಷ್ಟವಾದ ತೀರ್ಥಕ್ಷೇತ್ರವನ್ನಾಗಿ ಮಾಡಿಬಿಟ್ಟಿದ್ದಾರೆ.

ಶ್ರೀಮಾತೆಯವರು ಬೇಲೂರು ಮಠದ ಬಗ್ಗೆ ಒಮ್ಮೆ ಹೀಗೆ ಹೇಳಿದರು: "ಆಹಾ! ನಾನು ಬೇಲೂರು ಮಠದಲ್ಲಿ ಅದೆಷ್ಟು ಆನಂದವಾಗಿದ್ದೆ! ಅದೆಷ್ಟು ಪ್ರಶಾಂತವಾದ ತಾಣ! ಅಲ್ಲಿ ಧ್ಯಾನವು ಸಹಜವಾಗಿಯೇ ಉಂಟಾಗುತ್ತದೆ. ಅದಕ್ಕೆಂದೇ ನರೇಂದ್ರ ಇಲ್ಲಿಯೇ ಭೂಮಿಯನ್ನು ಕೊಂಡುಕೊಳ್ಳಬೇಕು ಎಂದು ಬಯಸಿದ್ದನು!"

ನಮಗಿದು ಆಶ್ಚರ್ಯವಾಗಿ ತೋರಬಹುದು. ಆದರೆ ಬೇಲೂರು ಮಠವು ದೈವವೇ ಆರಿಸಿದ ಸ್ಥಾನವಾಗಿತ್ತು ಎಂದು ಧಾರಾಳವಾಗಿ ಹೇಳಬಹುದು. ಒಮ್ಮೆ ಶ್ರೀಮಾತೆ ಶಾರದಾ ದೇವಿಯವರು ದಕ್ಷಿಣೇಶ್ವರಕ್ಕೆ ದೋಣಿಯಲ್ಲಿ ಹೋಗುತ್ತಿದ್ದರಂತೆ. ಈಗ ಬೇಲೂರು ಮಠವಿದ್ದೆಡೆಯಲ್ಲಿ ಬಾಳೆತೋಟವಿತ್ತಂತೆ. ದೋಣಿಯು ಈ ಪ್ರದೇಶದ ಹತ್ತಿರ ಸಾಗಿಹೋಗುತ್ತಿದ್ದಾಗ, ಶ್ರೀರಾಮಕೃಷ್ಣರು ಆ ಬಾಳೆತೋಟದಲ್ಲಿ ನಡೆದುಕೊಂಡು ಹೋಗುತ್ತಿದ್ದಂತೆ ಶ್ರೀಮಾತೆಯವರು ದರ್ಶನವನ್ನು ಪಡೆದರು. "ಅವರು ಇಲ್ಲೇಕೆ ನಡೆದುಕೊಂಡು ಹೋಗುತ್ತಿದ್ದಾರೆ?" ಎಂದು ಶ್ರೀಮಾತೆಯವರು ಆಶ್ಚರ್ಯಪಟ್ಟರಂತೆ. ಅಂದೇ ಅದನ್ನು ತಮ್ಮ ಸಹಚರರಿಗೆ ಹೇಳಿದರಂತೆ ಕೂಡ. ಅನಂತರ, ಸ್ವಾಮೀಜಿ ಇದೇ ಜಾಗವನ್ನು ಕೊಂಡುಕೊಂಡಾಗ, ಅದನ್ನು ತಿಳಿದು ಶ್ರೀಮಾತೆಯವರು ಬಹಳ ಸಂತೋಷಪಟ್ಟು, ಹೀಗೆ ಹೇಳಿದರು: "ಶ್ರೀರಾಮಕೃಷ್ಣರು ಈಗಾಗಲೇ ಇದೇ ಸ್ಥಾನವನ್ನು ಆಯ್ಕೆಮಾಡಿಕೊಂಡಿದ್ದಾರೆ. ಗಂಗೆಯ ಪಶ್ಚಿಮ ತಟ ವಾರಾಣಸಿಗೆ ಸಮಾನವಾದುದು. ಮಠವನ್ನು ಇಲ್ಲಿ ಸ್ಥಾಪಿಸಿ, ನರೇಂದ್ರ ಅದ್ಭುತ ಕಾರ್ಯವನ್ನು ನೆರವೇರಿಸಿದ್ದಾನೆ."

ಸ್ವಾಮಿ ವಿವೇಕಾನಂದರು ಕೂಡ, ಬೇಲೂರು ಮಠದ ಬಗ್ಗೆ ಭವಿಷ್ಯದೃಷ್ಟಿಯನ್ನು ಹೊಂದಿದ್ದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಸಂನ್ಯಾಸಿ ಶಿಷ್ಯರು, ಬಾರಾ ನಗರ ಎಂಬ ಸ್ಥಳದಲ್ಲಿ, ಹಳೆಯದಾಗಿ ಬಿದ್ದುಹೋಗಿದ್ದ ಮನೆಯೊಂದರಲ್ಲಿ ವಾಸವಾಗಿದ್ದರು. ಆ ಸಂದರ್ಭದಲ್ಲಿ ಬಾರಾ ನಗರದ ಗಂಗಾತಟದಲ್ಲಿ ನಿಂತುಕೊಂಡಿದ್ದ ಸ್ವಾಮೀಜಿ ಹೇಳಿದರು, "ನದಿಯ ಆಚೆಗೆ ಇರುವ ಸ್ಥಳದಲ್ಲಿಯೇ ನಮ್ಮ ಶಾಶ್ವತ ಮಠವು ಸ್ಥಾಪನೆಗೊಳ್ಳುವುದು ಎಂದು ಏಕೋ ನನಗೆ ಅನ್ನಿಸುತ್ತಿದೆ."

ಸ್ವಾಮಿ ಬ್ರಹ್ಮಾನಂದರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪುತ್ರರೆಂದು ಹೆಸರಾದವರು. ಅವರು ಬೇಲೂರು ಮಠದ ಬಗ್ಗೆ ಹೀಗೆ ಹೇಳುತ್ತಾರೆ: "ಈ ಬೇಲೂರು ಮಠವು ಕೈಲಾಸವಿದ್ದಂತೆ. ಇಲ್ಲಿ ಗುರು ಮತ್ತು ಗಂಗೆ ಇಬ್ಬರೂ ನೆಲಸಿದ್ದಾರೆ. ಇದು ವೈಕುಂಠವೇ ಸರಿ. ನಾನು ಬೇಲೂರು ಮಠದೊಡನೆ ಸಂಬಂಧವನ್ನು ಎಂದಿಗೂ ಕಡಿದುಕೊಳ್ಳಲಾರೆ. ನನ್ನ ಮರಣದ ನಂತರವೂ, ಮೇಲಿನಿಂದ ಬೇಲೂರು ಮಠವನ್ನು ನೋಡುತ್ತಲೇ ಇರುತ್ತೇನೆ."

ಸ್ವಾಮಿ ಶಿವಾನಂದರು ಹೇಳುತ್ತಾರೆ, "ಸ್ವಾಮೀಜಿ, ಶ್ರೀರಾಮಕೃಷ್ಣರನ್ನು ತಮ್ಮ ಹೆಗಲಿನ ಮೇಲೆ ಹೊತ್ತುತಂದು, ಇಲ್ಲಿ ಸಂಸ್ಥಾಪಿಸಿದ್ದಾರೆ. ಎಲ್ಲಿ ಶ್ರೀರಾಮಕೃಷ್ಣರು ನೆಲೆಸಿರುತ್ತಾರೋ, ಅಲ್ಲಿ ಶ್ರೀಮಾತೆ, ಸ್ವಾಮೀಜಿ, ಶ್ರೀರಾಮಕೃಷ್ಣರ ಎಲ್ಲ ಪ್ರತ್ಯಕ್ಷಶಿಷ್ಯರು ಖಂಡಿತ ಇದ್ದೇ ಇರುತ್ತಾರೆ. ಅವರೆಲ್ಲರೂ ಶಾಶ್ವತವಾಗಿ ಬೇಲೂರು ಮಠದಲ್ಲಿ ನೆಲೆಸಿರುತ್ತಾರೆ. ಕೆಲವೊಮ್ಮೆ ಅವರನ್ನು ನೋಡುತ್ತಿರುತ್ತೇನೆ."

ಮೇಲಿನ ವಿಚಾರಗಳನ್ನೆಲ್ಲ ಮನಸ್ಸಿನಲ್ಲಿ ತುಂಬಿಕೊಂಡು, ನಾವು ಬೇಲೂರು ಮಠವನ್ನು ದರ್ಶಿಸಲು ಹೊರಟೆವು. ಮೊದಲು ನೋಡಬೇಕಾದದ್ದೇನು? ಅದೋ, ಎದುರಿಗೆ ಭವ್ಯವಾಗಿ ಕಾಣುತ್ತಿರುವ ಶ್ರೀರಾಮಕೃಷ್ಣರ ಬೃಹದ್ ದೇಗುಲವನ್ನಲ್ಲದೆ ಮತ್ತೇನನ್ನು?!



## ಶ್ರೀರಾಮಕೃಷ್ಣ ಮಂದಿರ



ಮಂದಿರವನ್ನು ನೋಡುತ್ತ ನಿಂತೆವು. ಆಹಾ, ಎಷ್ಟು ದೊಡ್ಡದಾಗಿದೆ! ಎಷ್ಟು ಭವ್ಯವಾಗಿದೆ! ಅಷ್ಟೇ ಸರಳವಾದ ರಚನೆ ಕೂಡ ಹೌದು. ನಾವು ಮುಖ್ಯದ್ವಾರದ ಮುಂಭಾಗದಲ್ಲಿರುವ ಮೆಟ್ಟಿಲುಗಳನ್ನು ಏರಿದೊಡನೆಯೇ ನಮಗೆ ಕಾಣುವುದು, ಅಮೃತ ಶಿಲೆಯಲ್ಲಿ ಕೆತ್ತಿದ ಕಮಲಾಸನದ ಮೇಲೆ ವಿರಾಜಮಾನವಾಗಿರುವ ಶ್ರೀರಾಮಕೃಷ್ಣರ ಪವಿತ್ರಮೂರ್ತಿ. ಈ ಮೂರ್ತಿಯನ್ನು ನೋಡುತ್ತಿರುವಾಗ ನಮಗೆ ವೇದ ಮಂತ್ರವೊಂದು ಸ್ಮರಣೆಗೆ ಬಂದಿತು: **ರಾಜಾಧಿರಾಜಾಯ ಪ್ರಸಹ್ಯಸಾಹಿನೇ, ನಮೋ ವಯಂ ವೈಶ್ರವಣಾಯ ಕುರ್ಮಹೇ** – "ರಾಜಾಧಿರಾಜನೇ, ಯಶಸ್ಸು ಮತ್ತು ಸಂಪತ್ತುಗಳನ್ನು ದಯಪಾಲಿಸುವವನೇ, ನಾವು ನಮ್ಮ ನಮನಗಳನ್ನು ನಿನಗೆ ಸಲ್ಲಿಸುತ್ತೇವೆ." ಹಿಂದೆ ಇದ್ದ ಮಂದಿರದ ಬಗ್ಗೆ ಸ್ವಾಮಿ ಶಿವಾನಂದರು ಏನನ್ನು ಹೇಳಿದ್ದರೋ, ಆ ಮಾತು ಈ ನೂತನ ಮಂದಿರಕ್ಕೂ ಚೆನ್ನಾಗಿ ಒಪ್ಪುತ್ತದೆ. ಅದು ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಅವರು ಹೇಳಿದ್ದರು, "ಇದು ನಮ್ಮ ದೇವಮಂದಿರ. ಇದರಲ್ಲಿ ಕುಳಿತು ಸ್ವಲ್ಪ ಹೊತ್ತಾದರೂ ಜಪಧ್ಯಾನಗಳನ್ನು ಮಾಡು. ಶ್ರೀರಾಮಕೃಷ್ಣರ ಸಾನ್ನಿಧ್ಯ ಇಲ್ಲಿ ಪರಿಪೂರ್ಣವಾಗಿ ಪ್ರಕಟವಾಗಿದೆ. ಅವರು ಎಲ್ಲವನ್ನೂ ನೋಡುತ್ತಿರುತ್ತಾರೆ, ಎಲ್ಲವನ್ನೂ ಕೇಳಿಸಿಕೊಳ್ಳುತ್ತಿರುತ್ತಾರೆ. ಅವರನ್ನು ಭಕ್ತಿ, ಮುಕ್ತಿ, ಜ್ಞಾನ, ವಿವೇಕ, ವೈರಾಗ್ಯ ಮತ್ತು ನೀನು ಏನನ್ನು ಇಚ್ಛಿಸುತ್ತೀಯೋ ಅವೆಲ್ಲವನ್ನೂ ದಯಪಾಲಿಸುವಂತೆ ಪ್ರಾರ್ಥಿಸಿಕೋ." ನಾವು ಶ್ರೀರಾಮಕೃಷ್ಣರ ಎದುರಿಗೆ, ಸ್ವಲ್ಪ ಹೊತ್ತು ಶಾಂತವಾಗಿ ಕುಳಿತುಕೊಂಡೆವು; ಆ ದಿವ್ಯ ಪರಿಸರದ ಪವಿತ್ರತೆಯನ್ನು ಮನಸ್ಸಿನೊಳಗೆ ಆಳವಾಗಿ ಭಾವಿಸಿಕೊಂಡೆವು.

ಇನ್ನು ಗರ್ಭಮಂದಿರವನ್ನು ಇಣುಕಿ ನೋಡಿದೆವು. ಅಲ್ಲೇನೂ ಹೆಚ್ಚಿನ ಅಲಂಕಾರಗಳಿಲ್ಲ. ಇದು ಶ್ರೀರಾಮಕೃಷ್ಣರ ಆದರ್ಶಕ್ಕೆ ಒಪ್ಪುವಂತೆಯೇ ಇದೆ ಎನ್ನಬಹುದು. ಬಿಳಿಯ ಇಟಾಲಿಯನ್ ಅಮೃತಶಿಲೆಯಲ್ಲಿ ಕೆತ್ತಿದ, ಪೂರ್ಣವಾಗಿ ಅರಳಿನಿಂತ ಕಮಲಪುಷ್ಪದ ಮೇಲೆ ಶ್ರೀರಾಮಕೃಷ್ಣರು ಕುಳಿತಿದ್ದಾರೆ. ಆ ಕಮಲಾಸನದ ಕೆಳಗೆ ಇರುವ ವೇದಿಕೆಯು ಶಿವನ ಡಮರುವಿನ ಆಕಾರದಲ್ಲಿ ಕೆತ್ತಲ್ಪಟ್ಟಿದೆ. ಈ ವೇದಿಕೆಯ ಎಡ ಮತ್ತು ಬಲಭಾಗಗಳಲ್ಲಿ ಹಂಸದ ಚಿತ್ರವಿದೆ. ಎಷ್ಟಾದರೂ ಶ್ರೀರಾಮಕೃಷ್ಣರು ಪರಮಹಂಸರಲ್ಲವೇ?!

ಗರ್ಭಗುಡಿಯ ಪೂರ್ವದಿಕ್ಕಿನ ಗೋಡೆಯಲ್ಲಿ ಇರುವ ಗೂಡಿನಲ್ಲಿ ಶ್ರೀಮಾತೆಯವರ ಪವಿತ್ರ ಚಿತಾಭಸ್ಮವನ್ನು ಇರಿಸಿ ಪೂಜಿಸಲಾಗುತ್ತಿದೆ. ಪಶ್ಚಿಮ ದಿಕ್ಕಿನ ಗೋಡೆಯ ಗೂಡಿನಲ್ಲಿ ಬಾಣೇಶ್ವರ ಶಿವಲಿಂಗವಿದೆ. ಇದನ್ನು ಕೂಡ ಪ್ರತಿನಿತ್ಯವೂ ಪೂಜಿಸುತ್ತಾರೆ.

ಶ್ರೀರಾಮಕೃಷ್ಣರ ಸಾನ್ನಿಧ್ಯವಿರುವ ವೇದಿಕೆಯ ಮೇಲೆ ಇರುವ ಸುಂದರ ಮಂಟಪ ಗಂಧದ ಮರದಿಂದ ಮಾಡಿದ್ದು. ಅದರ ಮೇಲೆ ಓಂಕಾರವನ್ನು ಕೆತ್ತಲಾಗಿದೆ. ಗರ್ಭಮಂದಿರದ ದ್ವಾರಗಳನ್ನು ವಿನ್ಯಾಸ ಮಾಡಿದವನು ಚೀನಾದೇಶದ ಬಡಗಿ.

ಶ್ರೀರಾಮಕೃಷ್ಣರು ಸಮನ್ವಯಾಚಾರ್ಯರೆಂದು ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ. ಹಾಗೆಂದೇ ಅವರಿಗೆ ಮುಡಿಪಾದ ದೇಗುಲವು ಅವರ ಸಮನ್ವಯ ಸಂದೇಶವನ್ನು ಸಾರುವಂತೆ ನಿರ್ಮಾಣಗೊಳ್ಳಬೇಕು ಅನ್ನುವುದು ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಈ ದೇಗುಲದ ವೈಶಿಷ್ಟ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಆ ಸಾಮರಸ್ಯದ ಭಾವನೆಯು ಈ ಭವ್ಯ ಮಂದಿರದ ರೂಪದಲ್ಲಿ ಹೇಗೆ ಅಪೂರ್ವವಾಗಿ ಪ್ರಕಟಗೊಂಡಿದೆಯೆಂಬುದು ನಮಗೆ ತಿಳಿದುಬರುತ್ತದೆ.

(*ಮುಂದುವರಿಯುವುದು*)

**ಆಧಾರ:** *Belur Math, A Pilgrimage*

**ಪ್ರಕಾಶಕರು:** Sri Ramakrishna Math,
Mylapore, Chennai - 600 004